Sri D. DEVERAJ URS.—We are following some procedure just to help all. If you still feel it is wrong it is your right to say like that. You can criticise. I said some congressmen are also there. About Harijans we ha e taken a decision that atleast one Harijan should be there on the Committee and even if there are more than one Harijan, there is no bar. If the Hon. Member feel that a particular member should not be there, it is another matter. If there is any genuine mistake committed by the Government I certainly welcome it and we will try to rectify it. The Congressmen have been asked to run the administration and when that is the position, there is no bar to put them on the Committee.

Mr. DEPUTY SPEAKER.—The period of the Committee is almost terminated. One year is over The Hon. Members are fully within their right to make suggestions.

ಶ್ರೀ ಎಚ್. ಡಿ. ದೇವೇಗೌಡ.—ರ್ಯಾಂಡ್ ಗ್ರಾಂಟ್ಸ್ ಕಮಿಟಿಯಲ್ಲಿ ಪ್ರತಿಯೊಂದು ತಾಲ್ಲೂಕಿನ ಎಂ.ಎಲ್.ಎ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಮತ್ತು ಹರಿಜನ ಮೆಂಬರ್ ಸೇರಿಸಿದೆ. ಮುಖ್ಯ ಮಂತ್ರಿಗಳು ಹಿಂದೆ ಮಾಡಿದ ನಮಿತಿಗಳಲ್ಲಿ ಎಂ.ಎಲ್.ಎ. ಗಳಿರಲಿಲ್ಲವೆಂದು ಹೇಳಿದರು.

Sri D. DEVARAJ URS.—I stand corrected.

Mr. DEPUTY SPEAKR.—There were two types of Committees one for distribution of the revenue lands and another for distribution of forest land. In all the Districts including Shimoga for distribution of forest lands the M. L. As are there. So far as the South Kanara is concerned, thousands of acres of lands are there, but M.L.As are excluded and they are excluded with vengence.

ಶ್ರೀ ಎಚ್. ಎಸ್. ಸಿದ್ದಪ್ಪ.—ಎಲ್ಲಾ ರ್ಯಾಂಡ್ ಗ್ರಾಂಟ್ಸ್ ಕಮಿಟಿಗಳಲ್ಲೂ ಹರಿಜನರಿದ್ದಾರೆಂದು ಮುಖ್ಯಮಂತ್ರಿಗಳು ಹೇಳಿದರು. ನಮ್ಮ ಊರಿನಲ್ಲಿ ಸೇಕಡ 70 ರಷ್ಟು ಹರಿಜನರಿದ್ದರೂ ರ್ಯಾಂಡ ಗ್ರಾಂಟ್ಸ್ ಕಮಿಟಿಯಲ್ಲಿ ಹರಿಜನರಿಲ್ಲ. There is no Harijan in the Land Grant Committee. I have given a representation to the Minister in this regard.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಿ. ಲಚ್ಚೇಗೌಡ ಎನ್ನುವವರು ಮೆಂಬರ್, ಅವರು ಡಿಪ್ರೆಸ್ಡ್ ಕ್ಲಾಸಿಗೆ ಸೇರಿದವರು.

ಶ್ರೀ ಸಿ. ಬೈರೇಗೌಡ.—ಕೆಲವು ಕಡೆ ತಾಲ್ಲೂಕು ಅಭಿವೃದ್ಧಿ ಮಂಡಲ ಅಧ್ಯಕ್ಷರೊಬ್ಬರು ಮತ್ತು ವಿಧಾನಪರಿಷತ್ ಸದಸ್ಯರೊಬ್ಬರು ಇರುವರು. ಇಬ್ಬರಿಗೆ ರೆಪ್ರೆಸೆಂಟೇಷನ್ ಕೊಡಲು ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್ ಪ್ರಕಾರ ನಾವು ಮಾಡಿದ್ದೇವೆ, ಅದನ್ನು ಬಿಟ್ಟು ಎಲ್ಲೂ ಮಾಡಿಲ್ಲ.

Name Plates in Kannada Language

744. Sri S. BANGARAPPA (Sorab).—

Will the Chief Minister be pleased to state :—

(a) whether Government has any proposal before it to change compulsorily the name boards of all the Government Departments including Vidhana Soudha from English to Kannada language so as to give priority to Kannada Language ;

(*b*) if so, when the Government would issue orders to change these name boards ?

Sri D. DEVARAJ URS (Chief Minister).—

(*a*) and (*b*) Circular institructions have been issued ordering that wherever the name plates are only in English, the names of the office or/and officer be written in Kannada also.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಇರುವ ರಸ್ತೆಗಳು, ಸರಕಾರಿ ಕಚೇರಿಗಳು ವಿಧಾನಸೌಧವೂ ಸೇರಿ ಇವೆಲ್ಲಕ್ಕೂ ಕನ್ನಡದಲ್ಲೇ ಹೆಸರಿನ ಬೋರ್ಡುಗಳಿರಬೇಕಾದ್ದು ಅವಶ್ಯಕ, ಇಂಗ್ಲೀಷಿನಲ್ಲಿರಬೇಕಾದ ಪ್ರಮೇಯವಿಲ್ಲ. ಆದುದರಿಂದ ಸಂಪೂರ್ಣವಾಗಿ ಇಂಗ್ಲೀಷಿನಲ್ಲಿರುವ ಬೋರ್ಡುಗಳನ್ನು ತೆಗೆದು ಕನ್ನಡದಲ್ಲೇ ಇರುವಂತೆ ಮಾಡುವಿರಾ ? ಹೊರಗಡೆ ಕೂಡ ಎಲ್ಲಾ ಬೋರ್ಡುಗಳೂ ಕೂಡ ಕನ್ನಡದಲ್ಲೇ ಇರಬೇಕು. ಇದರ ಬಗ್ಗೆ ಯೋಚನೆ ಮಾಡುವಿರಾ ?

† ಶ್ರೀ ಡಿ. ದೇವರಾಜ ಅರಸ್.—ಕನ್ನಡದ ಬೋರ್ಡುಗಳನ್ನು ಹಾಕಬೇಕೆಂದು ಆಜ್ಞೆ ಮಾಡಲಾಗಿದೆ. ಕೆಲವು ಕಡೆ ಕನ್ನಡದ ಬೋರ್ಡಿನ ಜೊತೆಗೆ ಇಂಗ್ಲೀಷಿನ ಬೋರ್ಡು ಇರಬೇಕೆಂದು ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡದ ನಾಮಫಲಕ ಸರಕಾರಿ ಕಛೇರಿಗಳಲ್ಲಿ ಅಲ್ಲದೆ ಖಾನಗಿಯವರ ಅಂಗಡಿ ಮುಂತಾದ ಕಡೆಗಳಲ್ಲೂ ಇಡುವಂತೆ ನೋಡಿಕೆ ಕೊಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಹೋಟಲು, ಅಂಗಡಿ ಮುಂತಾದ ಕಡೆಗಳಲ್ಲಿ ಇಂಗ್ಲೀಷಿನಲ್ಲಿ ಬೋರ್ಡ್ ಇದ್ದರೆ ಕನ್ನಡದಲ್ಲೇ ಹಾಕಿ ಎಂದು ಒತ್ತಾಯಮಾಡುವುದು ಹೇಗೆ ?

ಶ್ರೀ ವಾಟಾಳ್ ನಾಗರಾಜ.—ವಿಧಾನಸೌಧದಲ್ಲಿ ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ಸರಿಯಾಗಿ ತರ್ಜುಮೆ ಮಾಡುತ್ತಿಲ್ಲ, ಅಂಡರ್ ಸೆಕ್ರೆಟರಿ ಎಂಬುದಕ್ಕೆ ವಾದೇಶಕ ಎಂದು ಹಾಕಿದ್ದಾರೆ. ಕನ್ನಡ ಬಾರದಿರುವವರ ಕೈಯಲ್ಲಿ ತರ್ಜುಮೆ ಮಾಡಿಸಿದ್ದಾರೆ ಎಂದು ಕಾಣುತ್ತದೆ. ಸರಿಯಾಗಿ ಕನ್ನಡ ಬರುವವರ ಕೈಯಲ್ಲಿ ತರ್ಜುಮೆ ಮಾಡಿಸಿ ಸರಿಯಾದ ಕನ್ನಡ ಪದ ಬಳಸುವಂತೆ ಮಾಡುವಿರಾ? ಬೇಕಾದರೆ ಸಾಹಿತ್ಯ ಪರಿಷತ್ತು ಮುಂತಾದ ಕಡೆಗಳಿಂದ ಅದಕ್ಕೆ ಬೇಕಾದ ಸಹಾಯವನ್ನು ಪಡೆದು ಕೊಳ್ಳಬಹುದು.

2-00 P.M.

ಶ್ರೀ ಡಿ. ದೇವರಾಜ ಅರಸ್.—ಅವರ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ತರ್ಜುಮೆ ಮಾಡತಕ್ಕ ಆ ಒಂದು ಕಷ್ಟ ಏನಿದೆ ಅದನ್ನು ಅವರು ಯೋಚನೆ ಮಾಡುವುದು ಒಳ್ಳೆಯದು. ಹೆಚ್ಚು ಪಾಂಡಿತ್ಯ ಪಡೆದವರಿಗೆ ಕರೆ ಕಳುಹಿಸೋಣ, ಅವರು ಸುಲಭ ಪದಗಳನ್ನು ಕೊಟ್ಟರೆ ಹಾಕೋಣ. ನನ್ನ ಅಭ್ಯಂತರವಿಲ್ಲ, ನಮ್ಮಲ್ಲಿ ರೀಜನರ್‌ಮೈಸ್ ಬಳಕೆಯಲ್ಲಿರುವ ಕನ್ನಡ ಇದೆ. ದಕ್ಷಿಣ ಕನ್ನಡಭಾಗದಲ್ಲಿ ಮಾತನಾಡುವ ಕನ್ನಡ ಬೇರೆ, ಕಾಲೇಜು ಎನ್ನುವುದಕ್ಕೆ ಕೋಲೇಜ್ ಎಂದು ಬರೆಯುತ್ತಾರೆ, ಧಾರವಾಡದ ಕಡೆ ಕನ್ನಡ ಪದಗಳು ಬೇರೆಬೇರೆಯಾಗುತ್ತವೆ. Unless it is verified ಅದನ್ನು ನಾನು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಕನ್ನಡ ತರ್ಜುಮೆ ಮಾಡುವವರು ಯಾವ ರೀಜನ್‌ನಿಂದ ಬಂದಿರುತ್ತಾರೋ ಆ ಭಾಷೆಯನ್ನು ಅವರು ಉಪಯೋಗ ಮಾಡಿರುತ್ತಾರೆ. ನನ್ನ ಮಾನ್ಯ ಸದಸ್ಯರು ಒಬ್ಬರು ಹೇಳುತ್ತಿದ್ದರು, 'ರನ್ನನ ಕಥೆಯ ರೀತಿಯಲ್ಲಿ ಓದರಿದರು' ಎಂದು. ಸಾಮಾನ್ಯವಾಗಿ ಓದುರೋದು ಎಂದು ನಾವು ಮಾತನಾಡಿದರೆ ಆ ಕಡೆಯವರು ಆಕ್ಷೇಪಣೆ ಮಾಡುತ್ತಾರೆ.